SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

ಸಂಯುಕ್ತ ಕರ್ನಾಟಕ

Online Newspaper Clipping Service
Dtd-Thursday, 22nd June 2023

Page No.03

# ಜಾಲಪ್ಪ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ

ಸಂ.ಕ ಸಮಾಚಾರ, ಕೋಲಾರ

ಮಾರಕ ಕ್ಯಾನ್ಸರ್ ರೋಗಕ್ಕೆ ಅತ್ಯಾಧುನಿಕ ಚಿಕಿತ್ಸೆಗಳಲ್ಲಿ ಒಂದಾದ ಹೈಪೆಕ್ ಚಿಕಿತ್ಸೆಯು ಈಗ ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ಲಭ್ಯವಿದೆ ಎಂದು ವೈದ್ಯಕೀಯ ಅಧೀಕ್ಷಕ ಡಾ.ಜೆ.ಕೃಷ್ಣಪ್ಪ ತಿಳಿಸಿದ್ದಾರೆ.

ಈ ಚಿಕಿತ್ಸೆಯಲ್ಲಿ ಔಷಧಿಗಳನ್ನು ಉದರಕೋಶದಲ್ಲಿ ನೀಡಿದಾಗ ಅದು ರಕ್ತದ ಮುಖಾಂತರ ದೇಹದ ವಿವಿಧ ಭಾಗದಲ್ಲಿರುವ ಕ್ಯಾನ್ಸರ್ ಕಣಗಳು ಇರುವೆಡೆಗೆ ಚಲಿಸಿ ಅದನ್ನು ತಡೆಯುವಲ್ಲಿ ಯಶಸ್ವಿಯಾಗುತ್ತದೆ.

ಈ ಚಿಕಿತ್ಸೆ ಮೂಲಕ ಮ್ಯಾಕ್ರೋಸ್ಕೋಪಿಕ್ ಮತ್ತು ಮೈಕ್ರೋಸ್ಕೋಪಿಕ್ (ಸಣ್ಣ ಮತ್ತು ದೊಡ್ಡ) ಗಾತ್ರದಕ್ಯಾನ್ಸರ್ ಕೋಶಗಳನ್ನು ಗುರುತಿಸಿ ಚಿಕಿತ್ಸೆ ನೀಡಿದಲ್ಲಿಚಿಕಿತ್ಸೆ ಯಶಸ್ವಿಯಾಗುತ್ತದೆ ಎಂದು ಹೇಳಿದ್ದಾರೆ.

ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳ ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಅತ್ಯಾಧುನಿಕ ಚಿಕಿತ್ಸೆ ದೊರಕಿಸಲು ಮತ್ತು ದೂರದ ಊರುಗಳಿಗೆ ಇದಕ್ಕಾಗಿ ತೆರಳುವ ತೊಂದರೆ ನಿವಾರಿಸಲು ಹೈಪೆಕ್ ಸೌಕರ್ಯವನ್ನು ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ಶಸ್ತ್ರಚಿಕಿತ್ಸೆಯ ತಂಡದಲ್ಲಿ ಕ್ಯಾನ್ಸರ್ ಸರ್ಜನ್ ಡಾ॥ಅಶ್ವತ್ಥಪ್ಪ, ಡಾ॥ಅಭಯ್, ಡಾ॥ಲೋಕನಾಥ್, ಅರವಳಿಕೆ ವಿಭಾಗದ ಡಾ॥ಕಿರಣ್, ಡಾ॥ಸಿಂಧು ನಿರ್ವಹಿಸುವರು ಎಂದು ತಿಳಿಸಿದ್ದಾರೆ.

ಸಾಮಾನ್ಯ ಜನರಲ್ಲಿ ಕಂಡುಬರುವ ಅಂಡಾಶಯದ ಗಡ್ಡೆ ಮತ್ತು ಕರುಳುವಾಳ ಅಪೆಂಡಿಕ್ಸ್ ಗಡ್ಡೆಗಳನ್ನು ಹೈಪೆಕ್ ಶಸ್ತ್ರಚಿಕಿತ್ಸೆಯ ಮೂಲಕ ಗುಣಪಡಿಸಲಾಗುವುದು ಎಂದು ತಿಳಿಸಿದರು.

ಸಂಯುಕ್ತ ಕರ್ನಾಟಕ

# ವಾಕ್ ಶ್ರವಣ ವ್ಯಾಸಂಗದಿಂದಾಗಿ ವಿಪುಲ ಉದ್ಯೋಗಾವಕಾಶ ಲಭ್ಯ



ಸಂ.ಕ ಸಮಾಚಾರ, ಕೋಲಾರ

ಜಾಲಪ್ಪ ಆಸ್ಪತ್ರೆಯಲ್ಲಿ ಹೊಸದಾಗಿ ವಾಕ್ ಶ್ರವಣ ಚಿಕಿತ್ಸಾ ವಿಭಾಗ ಸ್ಥಾಪಿಸಲಾಗಿದೆ. ಈ ಅಂಗವಾಗಿ ಮಂಗಳವಾರ ಏರ್ಪಡಿಸಿದ್ದ ವಸ್ತು ಪ್ರದರ್ಶನವನ್ನು ನಗರದ ನೂರಾರು ವಿದ್ಯಾರ್ಥಿಗಳು ವೀಕ್ಷಿಸಿದರು.

ನಾವು ಯಾವ ರೀತಿ ಮಾತನಾಡುತ್ತೇವೆ ಹಾಗೂ ಕೇಳುತ್ತೇವೆ, ಕೇಳುವಿಕೆಯಲ್ಲಿ ಕಿವಿ ಹಾಗೂ ಮೆದುಳಿನ ಕಾರ್ಯ ವೈಖರಿ ಯಾವ ರೀತಿ ಇರುತ್ತದೆ, ಒಬ್ಬ ಮನುಷ್ಯ ಮಾತನಾಡಬೇಕಾದರೆ ಆ ಕ್ರಿಯೆಯಿಂದ ಶುರುವಾಗಿ ತುಟಿಗಳ ಮಟ್ಟದಲ್ಲಿ ಯಾವ ರೀತಿ ಪರಿಪೂರ್ಣವಾಗುತ್ತದೆ, ಶ್ರವಣೋಪಕರಣಗಳು ಹಾಗೂ ಕಾಕ್ಲಿಯರ್ ಇಂಪ್ಲಾಂಟ್ ಸಾಧನಗಳಲ್ಲಿ ಇತ್ತೀಚಿನ ಬೆಳವಣಿಗೆಗಳೇನು, ಇವೆ ಹಲವಾರು ವಿಷಯಗಳು ಈ ವಸ್ತು ಪ್ರದರ್ಶನದ ಮುಖ್ಯ ವಿಷಯಗಳಾಗಿದ್ದವು.

ವಾಕ್ ಮತ್ತು ಶ್ರವಣ ವಿಭಾಗದಲ್ಲಿ ಬಿ.ಎಸ್.ಸಿ ಅಥವಾ ಎಂ.ಎಸ್.ಸಿ ಯನ್ನು ಪಡೆದರೆ ಅಂತಹವರಿಗೆ ಸಮಾಜ ಹಾಗೂ ಸರ್ಕಾರದ ಮಟ್ಟದಲ್ಲಿ ಯಾವ ರೀತಿ ಕೆಲಸದ ಅವಕಾಶಗಳು ಸಿಗುತ್ತದೆ ಎಂಬುದರ ಬಗ್ಗೆ ಪಿಯುಸಿ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲಾಯಿತು. ವಸ್ತು ಪ್ರದರ್ಶನವನ್ನು ಸಂಸ್ಥೆಯ ಉಪಕುಲಪತಿ ಡಾ.ಡಿ.ವಿ.ಎಲ್.ಎನ್ ಪ್ರಸಾದ್ ಉದ್ಘಾಟಿಸಿದರು.